# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 30.07.2020 ರಂದು ಪೂರ್ವಾಹ್ನಗಂಟೆ11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ವಿಶೇಷ ಸಭೆಯ ನಡವಳಿಗಳು.**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು:**

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಮಾನ್ಯ ಕುಲಪತಿಯವರನ್ನು, ಎಲ್ಲಾ ಸಿಂಡಿಕೇಟು ಸದಸ್ಯರನ್ನು, ಕುಲಸಚಿವರು(ಪರೀಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಯವರನ್ನು ಸಭೆಗೆ ಸ್ವಾಗತಿಸಿದರು ಮತ್ತು ಮಾನ್ಯ ಕುಲಪತಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಕೇಳಿಕೊಂಡರು.

ಮಾನ್ಯ ಕುಲಪತಿಯವರು National Education Policy 2020 ಅನುಮೋದಿತಗೊಂಡಿರುವುದನ್ನು ಸಿಂಡಿಕೇಟು ಸಭೆಗೆ ತಿಳಿಸಲು ಹರ್ಷಿಸುತ್ತಾ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರ ಪರವಾಗಿ ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಡಾ. ರಮೇಶ್ ಪೊಕ್ರಿಯಾಲ್ ನಿಶಾಂಕ್ ಇವರಿಗೆ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆ ತರಲಿದೆ. ಈ ಬಗ್ಗೆ ಮುಂದೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗುವುದು. ವಿದ್ಯಾರ್ಥಿಗಳು, ಸಿಂಡಿಕೇಟು ಸದಸ್ಯರು, ಶೈಕ್ಷಣಿಕ ಮಂಡಳಿ ಸದಸ್ಯರು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ, ಆಸಕ್ತ ವ್ಯಕ್ತಿಗಳು ಪಾಲ್ಗೊಂಡು, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯಾವ ರೀತಿ ಅನುಷ್ಠಾನ ಮಾಡುವುದು, ರಚನೆ, ನಿರಂತರ ನಿರ್ಧಾರ ಹೇಗಿರಬೇಕು ಎಂಬ ಬಗ್ಗೆ ಅನಿಸಿಕೆಗಳನ್ನು ಪಡೆಯಬಹುದು ಎಂದು ಮಾನ್ಯ ಕುಲಪತಿಯವರು ಸಿಂಡಿಕೇಟು ಸಭೆಗೆ ತಿಳಿಸಿದರು.

ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಮೇಶ್ ಕೆ., ಇವರು ದಿನಾಂಕ 21.05.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ಇತರ ವಿಷಯಗಳಲ್ಲಿ ಕ್ರಮಸಂಖ್ಯೆ 2ರ (ಅನುಸರಣಾ ವರದಿಯ ಕ್ರಮ ಸಂಖ್ಯೆ18ರ) ವಿಷಯಕ್ಕೆ ಈ ಕೆಳಗಿನ ತಿದ್ದುಪಡಿಯನ್ನು ಸೂಚಿಸಿರುತ್ತಾರೆ.

**ಮಂಗಳೂರು ವಿಶ್ವವಿದ್ಯಾನಿಲಯದ ಸಿಸಿಟಿವಿ, ಸೋಲಾರ್ ಅಳವಡಿಕೆ ಬಗೆಗಿನ ಆಂತರಿಕ ಪರಿಶೀಲನಾ ಸಮಿತಿಯ ಮೊದಲ ಪರಿಶೀಲನಾ ಸಭೆಯು ದಿನಾಂಕ 13.02.2020 ರಂದು ನಡೆದಿದ್ದು, ಇದರ ನಡವಳಿಯನ್ನು ಮಾನ್ಯ ಕುಲಸಚಿವರಿಗೆ ದಿನಾಂಕ 19.02.2020 ರಂದು ಈ ಎರಡು ಸಮಿತಿ ಅಧ್ಯಕ್ಷರಾದ ಪ್ರೊ. ನವೀನ್ ಕುಮಾರ್ ಎಸ್.ಕೆ., ನಿರ್ದೇಶಕರು, ಗಣಕ ಯಂತ್ರ ಕೇಂದ್ರ ಇವರು ಸಲ್ಲಿಸಿರುತ್ತಾರೆ. ಈ ನಡವಳಿಯಲ್ಲಿ ಸಿಸಿಟಿವಿ, ಸೋಲಾರ್ ಅಳವಡಿಕೆಯ ಬಗೆಗಿನ ಕಡತವನ್ನು ಸಮಿತಿಗೆ ನೀಡುವಂತೆ ತಿಳಿಸಲಾಗಿತ್ತು. ಇದಕ್ಕೆ ಸಂಬಂಧಿಸಿದ ಕಡತಗಳು ಮೇ ಮೊದಲ ವಾರದಲ್ಲಿ ಸಿಗುತ್ತದೆ. ಇದರಿಂದಾಗಿ ಅವರುವರದಿ ಕೊಡಲು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕಡತವನ್ನು ಒದಗಿಸಲು ತಡಮಾಡಲು ಕಾರಣೀಭೂತರಾದವರಿಗೆ ದಯವಿಟ್ಟು ನೋಟೀಸ್ ನೀಡಿ ಉತ್ತರವನ್ನು ಕೇಳಬೇಕಾಗಿ ವಿನಂತಿಸಿದರು ಹಾಗೂ ಇಂತಹ ಘಟನೆ ಮುಂದುವರೆಯುವ ಸಾಧ್ಯತೆಯಿರುವುದರಿಂದ ಅಂತಹವರನ್ನು ವರ್ಗಾಯಿಸಬೇಕು ಎಂಬುದಾಗಿ ಅಭಿಪ್ರಾಯಪಟ್ಟರು.**

**ಮುಂದುವರಿದು ಸೋಲಾರ್ ಮತ್ತು ಸಿಸಿಟಿವಿ, ಅಳವಡಿಕೆ ಬಗೆಗಿನ ಆಂತರಿಕ ಪರಿಶೀಲನಾ ಸಮಿತಿಯ ಸಭೆಯ ಸಂದರ್ಭದಲ್ಲಿ ಕಚೇರಿ ಸಿಬ್ಬಂದಿಗಳಾದ ಶ್ರೀಮತಿ ಜ್ಯೋತಿ ಕುಮಾರಿ ಎ.ಎಸ್, ಶ್ರೀಮತಿ ನಾಗವೇಣಿ ಪಿ, ಸಹಾಯಕ ಕುಲಸಚಿವರು, ಶ್ರೀಮತಿ ವೀಣಾ, ಅಧೀಕ್ಷಕರು, ಶ್ರೀಮತಿ ಶುಭಕಾಂತಿ,ಶ್ರೀಮತಿ ಹೇಮಲತಾ ಎಂ,**

**ಸಹಾಯಕ ಕುಲಸಚಿವರು, ಶ್ರೀಮತಿ ಬಾಲಿನಿ ಕೆ.ಬಿ, ಅಧೀಕ್ಷಕರು, ಮಾಹಿತಿ ನೀಡಿರುತ್ತಾರೆ. ಇವರೆಲ್ಲರೂ ಸಮಿತಿಗೆ ಕಡತದಲ್ಲಿರುವ ವಿಷಯವನ್ನು ಮನವರಿಕೆ ಮಾಡಿರುತ್ತಾರೆ ಎಂಬುದಾಗಿ ತಿಳಿಸಿದರು.**

**I ನಡವಳಿಗಳ ದೃಢೀಕರಣ:**

1. ದಿನಾಂಕ 14.07.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಯ ಅನುಸರಣಾ ವರದಿಯ ಅನುಮೋದನೆ ಕ್ರಮ ಸಂಖ್ಯೆ –2ರ ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ವಿ.ಸ.2:3(2020) ಬೋಧಕೇತರ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಿರುವ ಬಗ್ಗೆ ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

   ದಿನಾಂಕ 23.06.2020 ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಬೋಧಕೇತರ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಿರುವ ಪ್ರಸ್ತಾವನೆಯನ್ನು ಪರಿಶೀಲಿಸಲು **ಶ್ರೀ ವಿವೇಕಾನಂದ ಪನಿಯಾಲ – ಅಧ್ಯಕ್ಷರು, ಪ್ರೊ. ಡಿ. ಶಿವಲಿಂಗಯ್ಯ – ಸದಸ್ಯರು, ಕುಲಸಚಿವರು – ಸದಸ್ಯ ಕಾರ್ಯದರ್ಶಿ ಇವರುಗಳನ್ನೊಳಗೊಂಡ ಸಮಿತಿ ರಚನೆ ಮಾಡುವುದು ಹಾಗೂ ಅಗತ್ಯವಿದ್ದಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಅಧಿಕಾರಿಯವರನ್ನು ಸಮಿತಿ ಸಭೆಗೆ ಆಹ್ವಾನಿಸಿ ಮಾಹಿತಿ ಪಡೆಯುವುದು.**

2. ದಿನಾಂಕ 14.07.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳಲ್ಲಿಕಾರ್ಯಸೂಚಿ ಸಂಖ್ಯೆ: ಹಣಕಾಸು: ಸಾ.ಸ.3:01(2020) ಯ ಮಂಗಳೂರು ವಿಶ್ವವಿದ್ಯಾನಿಲಯದ 2020–21ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

   ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ 2020–21ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ಅನುಮೋದಿಸಲಾಯಿತು.

   ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಮೋಹನ್ ಪಡಿವಾಳ್ ಇವರು 2019–20ನೇ ಸಾಲಿನ ಪರಿಷ್ಕೃತ ಅಂದಾಜು ಆಯವ್ಯಯ ಮತ್ತು 2020–21ನೇ ಸಾಲಿನ ಅಂದಾಜು ಆಯವ್ಯಯಕ್ಕೆ ಸಂಬಂಧಿಸಿ 2020–21ನೇ ಸಾಲಿನಲ್ಲಿ ಒಟ್ಟು ಶೇಕಡಾ 13ರಷ್ಟು ಹೆಚ್ಚಳವಾಗಿರುತ್ತದೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಋಣ ಮತ್ತು ಠೇವಣಿಗಳಿಗೆ ಸಂಬಂಧಿಸಿ ನಿರಖು ಠೇವಣಿಯ ಹೂಡಿಕೆ ಮತ್ತು ನಿರಖು ಠೇವಣಿಯ ನಗದೀಕರಣ, ವಿದ್ಯಾರ್ಥಿ ವೇತನ, ಶೈಕ್ಷಣಿಕ ಸಾಲದ ಮರುಪಾವತಿ, ಗುತ್ತಿಗೆದಾರರ ಮುಂಗಡ ಠೇವಣಿ ಮತ್ತು ಮರುಪಾವತಿ, ಗಣಕಯಂತ್ರ ಮುಂಗಡ ಮತ್ತು ವಸೂಲಾತಿ ಇತ್ಯಾದಿಗಳನ್ನು ಒಳಗೊಂಡಿರುತ್ತದೆ ಮತ್ತು ಅಂದಾಜು ಆಯವ್ಯಯದ ಪೈ ಚಾರ್ಟ್‌ನಲ್ಲಿ ಶೇಕಡಾವನ್ನು ನಮೂದಿಸುವುದರ ಜೊತೆಗೆ ಮೊತ್ತವನ್ನು ಸಹ ನಮೂದಿಸಲು ತಿಳಿಸಿರುವುದನ್ನು ಪರಿಗಣಿಸಲಾಯಿತು.

   **ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಪಾರ್ವತಿ ಅಪ್ಪಯ್ಯ ಇವರು ಹಣಕಾಸು ಸಭೆಯ ಕಾರ್ಯಸೂಚಿ ನಿರ್ಣಯಕ್ಕೆ ಸಂಬಂಧಿಸಿ ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ ಇಲ್ಲಿಗೆ 2020–21ನೇ ಸಾಲಿನ ಅಂದಾಜು ಆಯವ್ಯಯದಲ್ಲಿ ಕಾಲೇಜಿನ ಅಭಿವೃದ್ಧಿಗಾಗಿ 5.00 ಕೋಟಿಯನ್ನು ಮೀಸಲಿಡಲು ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿ 2020–21ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಪರಿಷ್ಕರಿಸಿ ಪರಿಗಣಿಸಲಾಗುವುದೆಂದು ತೀರ್ಮಾನಿಸಲಾಯಿತು.**

ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ವಿವೇಕಾನಂದ ಪನಿಯಾಲ ಇವರು ರಾಮಕೃಷ್ಣ ಮಿಷನ್ ಸಂಸ್ಥೆಯಲ್ಲಿ ನಿರ್ವಹಿಸುತ್ತಿರುವ Solid Waste Management ನಿರ್ವಹಣೆ ಮಾದರಿಯನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೂಡಾ ಬಳಸಿಕೊಳ್ಳಬಹುದೆಂದು ಅಭಿಪ್ರಾಯ ಪಟ್ಟರು

**ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಎಂ.ಎಸ್. ತಳವಾರ್ ಇವರು ಬಜೆಟ್‌ನಲ್ಲಿ ಲೆಕ್ಕವಿಲ್ಲದ (unaccounted) ಅಥವಾ ಹಕ್ಕು ಪಡೆಯದ (unclaimed) ಹಣವಿದ್ದಲ್ಲಿ, ಕೋವಿಡ್ –19 ಹಿನ್ನೆಲೆಯಲ್ಲಿ ಅನಿರೀಕ್ಷಿತ ಆದಾಯ ಮೊಟಕುಗೊಳ್ಳುವ ಸಂದರ್ಭದಲ್ಲಿ ಬಳಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯ ಪಟ್ಟರು.**

3. ದಿನಾಂಕ 14.07.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳಲ್ಲಿ ಕಾರ್ಯಸೂಚಿ ಸಂಖ್ಯೆ: ಪ.ಜಾ/ಪ.ಪಂ ಘಟಕ: ಸಾ.ಸ.3:03(2020) ಶ್ರೀ. ಯೋಗೇಶ ಕೆ.ಎಂ. ಸಂಶೋಧನಾ ವಿದ್ಯಾರ್ಥಿ, ಗಣಕ ವಿಜ್ಞಾನ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಪಡೆದ ಮುಂಗಡ ಮೊತ್ತದ ಮರುಪಾವತಿ ಬಗ್ಗೆ ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

ಶ್ರೀ ಯೋಗೇಶ ಕೆ.ಎಂ. ಸಂಶೋಧನಾ ವಿದ್ಯಾರ್ಥಿ, ಗಣಕ ವಿಜ್ಞಾನ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಪಡೆದ ಮುಂಗಡ ಮೊತ್ತದ ಮರುಪಾವತಿ ಬಗ್ಗೆ**ಕುಲಸಚಿವರು ದಾಖಲೆಗಳನ್ನು ಪರಿಶೀಲಿಸಿ, ದಾಖಲೆಗಳು ಸರಿಯಿದ್ದಲ್ಲಿ ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.**

4. ದಿನಾಂಕ 14.07.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳಲ್ಲಿ ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.3:06(2020) ಗ್ರಾಮೀಣ ಬ್ಯಾಂಕಿಂಗ್ ಮತ್ತು ನಿರ್ವಹಣಾ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬೆರಳಚ್ಚುಗಾರ–ವ–ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಂ.ಸೀತಾರಾಮ ಇವರು ತಮ್ಮ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಹೂಡಿರುವ ದಾವೆಗೆ ಸಂಬಂಧಿಸಿ, ವಿಶ್ವವಿದ್ಯಾನಿಲಯವು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಸಂಖ್ಯೆ:ಡಬ್ಲ್ಯೂಎ:3659/2012(ಎಸ್–ಆರ್‌ಇಎಸ್)ದಿನಾಂಕ 23.10.2019 ರ ತೀರ್ಪಿನ ಅನುಷ್ಠಾನದ ಕುರಿತು ವಿಶ್ವವಿದ್ಯಾನಿಲಯದ ವತಿಯಿಂದ ಕಾನೂನು ಅಭಿಪ್ರಾಯ ಪಡೆದ ಬಗ್ಗೆ ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

**ಈ ವಿಷಯವನ್ನು ವಿಶ್ವವಿದ್ಯಾನಿಲಯದಲ್ಲಿ ಪೂರ್ವೋದಾಹರಣೆ ಎಂದು ಪರಿಗಣಿಸದೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಹೈಕೋರ್ಟಿನ ತೀರ್ಪುಗಳನ್ನು ಗಮನಿಸಿಕೊಂಡು ಕಾನೂನು ಅಭಿಪ್ರಾಯದಂತೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.**

5. ದಿನಾಂಕ 14.07.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳಲ್ಲಿ ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ಸಾ.ಸ.3:08(2020)ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಮತ್ತು ಆರ್ಥಿಕ ಶಿಸ್ತು ಪಾಲನೆಯ ಹಿನ್ನೆಲೆಯಲ್ಲಿ ಪ್ರಸ್ತುತ ತಾತ್ಕಾಲಿಕ ಹಾಗೂ ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಸರ್ಕಾರದ ನಿಯಮಗಳನ್ನು ಪಾಲಿಸಿ ಬಳಸಿಕೊಳ್ಳುವ ಕುರಿತು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಮತ್ತು ಆರ್ಥಿಕ ಶಿಸ್ತು ಪಾಲನೆಯ ಹಿನ್ನೆಲೆಯಲ್ಲಿ ಪ್ರಸ್ತುತ ತಾತ್ಕಾಲಿಕ ಹಾಗೂ ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಸರ್ಕಾರದ ನಿಯಮಗಳನ್ನು ಪಾಲಿಸಿ ಬಳಸಿಕೊಳ್ಳುವ ಕುರಿತ 1ನೇ ವಿಚಾರಕ್ಕೆ ಸಂಬಂಧಿಸಿ ಘಟನೋತ್ತರ ಅನುಮೋದನೆ ನೀಡಲಾಯಿತು.

**ಮುಂದುವರಿದು ಕಾನೂನು ಕಾರ್ಮಿಕ, ಕಾನೂನು ತಜ್ಞರ ಸಲಹೆ ಪಡೆದು, ಕಾನೂನು ಹಾಗೂ ಆಡಳಿತಾತ್ಮಕ ಪರಿಣಾಮಗಳನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಿ ತದನಂತರ ಕಾನೂನು ಪ್ರಕಾರ ಸೂಕ್ತ ನಿರ್ಣಯ ಕೈಗೊಳ್ಳುವುದು. ಅಲ್ಲಿಯವರೆಗೆ ವಿಶ್ವವಿದ್ಯಾನಿಲಯದ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಸಲು ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳುವಂತೆ ನಿರ್ಣಯಿಸಲಾಯಿತು.**

6. ದಿನಾಂಕ 14.07.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳಲ್ಲಿ ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ಸಾ.ಸ.3:11(2020)ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ–ನಾಟೆಕಲ್‌ನಲ್ಲಿರುವ A S K Towersನ 12 ಪ್ಲಾಟ್‌ಗಳನ್ನು ಪರವಾನಗಿ ಶುಲ್ಕದ ಆಧಾರದ (ಲೈಸೆನ್ಸ್ ಫೀ) ನೆಲೆಯಲ್ಲಿ ತೆಗೆದುಕೊಳ್ಳುವ ಬಗ್ಗೆ ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

**ಸದ್ರಿ ವಿಷಯದ ಬಗ್ಗೆ ಸಿಂಡಿಕೇಟ್ ಸದಸ್ಯರು ಕರಡು ಎಗ್ರಿಮೆಂಟ್ ಕಾನೂನು ಪ್ರಕಾರ ಇಲ್ಲವಾಗಿದ್ದು KTPP Act 1999ರ ಉಲ್ಲಂಘನೆ ಮಾಡಿರುತ್ತಾರೆ ಎಂಬುದಾಗಿ ಅಭಿಪ್ರಾಯಿಸಿದರು. ಆದಾಗ್ಯೂ ಪ್ಲಾಟ್‌ನ ಮಾಲಕರಲ್ಲಿ ಮಾಲಕತ್ವದ ಪರವಾನಿಗೆ ಇರುವ ಬಗ್ಗೆ ಮಾಹಿತಿ ಲಗತ್ತಿಸಿಲ್ಲ. ಆದುದರಿಂದ ಮಾಲಿಕತ್ವ ಮತ್ತು ತೆರಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿಕೊಂಡು ಪರವಾನಿಗೆಯನ್ನು ಸಹಿಮಾಡುವುದು. ವಿಶ್ವವಿದ್ಯಾನಿಲಯಕ್ಕೆ ಪ್ರಸ್ತುತ ಅಗತ್ಯವಿರುವ ಪ್ಲಾಟ್‌ಗಳ ಸಂಖ್ಯೆಯನ್ನು ಒಪ್ಪಂದದಲ್ಲಿ ನಮೂದಿಸುವುದು. ಈಗಿನ ಕರಡು ಪರವಾನಿಗೆಯನ್ನು ತಿರಸ್ಕರಿಸಿದ್ದು, ಸದ್ರಿ ವಿಷಯವನ್ನು ವಿಶ್ವವಿದ್ಯಾನಿಲಯವು ಕಾನೂನು ತೊಡಕಾಗದಂತೆ ಪುನಃ ಪರಿಶೀಲಿಸಿ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.**

**IIಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿ.ಸ.3:01(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕಾನೂನು ಘಟಕವನ್ನು ಸಬಲೀಕರಣಗೊಳಿಸುವ ಬಗ್ಗೆ ಹಾಗೂ ಸದರಿ ಘಟಕಕ್ಕೆ ನ್ಯಾಯಾಧಿಕಾರಿಯವರ ಸೇವೆಯನ್ನು ಗುತ್ತಿಗೆ ಆಧಾರದಲ್ಲಿ ಪಡೆಯುವ ಬಗ್ಗೆ

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಕಾನೂನು ನೀತಿ ನಿರೂಪಣೆಯ ಪ್ರಕ್ರಿಯೆಯು ಈಗಾಗಲೇ ನಡೆಯುತ್ತಿದೆ. ಅದೇ ಸಮಿತಿಯು ಕಾನೂನು ಅಧಿಕಾರಿಗೆ ಇರಬೇಕಾದ ಅರ್ಹತೆ ಹಾಗೂ ಆಯ್ಕೆಯ ಮಾನದಂಡಗಳನ್ನು ಸೂಚಿಸಲು ಸಿಂಡಿಕೇಟು ಸಭೆಯು ನಿರ್ಣಯಿಸಿತು. ತದನಂತರ ಸದರಿ ವರದಿಯ ಆಧಾರದಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ಪತ್ರಿಕಾ ಪ್ರಕಟಣೆ ಹೊರಡಿಸಿ ಅರ್ಹತೆ ಮತ್ತು ಅನುಭವದ ಆಧಾರದಲ್ಲಿ ನೇಮಕಾತಿ ಮಾಡಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ವಿ.ಸ.3:02(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ e-governanceಜಾರಿಗೆ ಸಂಬಂಧಿಸಿದ ಹಾಲಿ ಯೋಜನೆಗಳ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯವು e-governanceಜಾರಿಗೆ ತರುವ ಸಂಬಂಧ Keonics ಸಂಸ್ಥೆಯವರಿಗೆ ಈ ಕೆಳಗಿನ ನಾಲ್ಕು ಕಾರ್ಯಾದೇಶಗಳನ್ನು ನೀಡಿರುತ್ತದೆ.

(1) Automation of Human Resource and Pay Roll Department.

(2)Automation of Examination Department.

(3) Automation of Admission and Enrollment Department.

(4). Document Management, Workflow and File TrackingSystem.

ಈ ಪೈಕಿ ಮೊದಲ 3 ಯೋಜನೆಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು Campus Management International Pvt Ltd ಸಂಸ್ಥೆ ತಾನು ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತದೆ. ಈ ಯೋಜನೆಯಲ್ಲಿ ತಾಂತ್ರಿಕ, ಆರ್ಥಿಕ, ಒಪ್ಪಂದಕ್ಕೆ ಸಂಬಂಧಿಸಿದ, ಕಾನೂನಾತ್ಮಕ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಒಟ್ಟು ಐದು ಅಂಶಗಳಿರುತ್ತವೆ. ಅದರಲ್ಲಿ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದ ಚಿತ್ರಣವನ್ನು ಹಾಗೂ

ಮುಖ್ಯಾಂಶಗಳನ್ನು (presentation) Campus Management International Pvt Ltd ಪ್ರತಿನಿಧಿಯಾದ ಶ್ರೀ ಪ್ರಶಸ್ತ್ ಕರಗೋಳ್ ಅವರು ಸಿಂಡಿಕೇಟು ಸಭೆಯಲ್ಲಿ ಮಂಡಿಸಿದರು. ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Campus Management International Pvt Ltd ಸಂಸ್ಥೆಯ ನಡುವೆ ನೇರ ಒಪ್ಪಂದದ ಕುರಿತಾಗಿ ಕೇಳಿದ ಪ್ರಶ್ನೆಗೆ ಸಮರ್ಪಕ ಉತ್ತರ ಲಭ್ಯವಾಗಲಿಲ್ಲ. ಅಲ್ಲದೆ ಸರಕಾರ ಅಭಿವೃದ್ಧಿ ಪಡಿಸಿದ **HRMS** ತಂತ್ರಾಂಶಕ್ಕೂ Campus Management International Pvt Ltd ಸಂಸ್ಥೆಯವರು ಪ್ರಸ್ತುತ ಪಡಿಸಿರುವ ತಂತ್ರಾಂಶಕ್ಕೂ ಗಂಭೀರವಾದ ವ್ಯತ್ಯಾಸಗಳಿಲ್ಲದಿರುವುದು ಕಂಡು ಬಂದಿದೆ. ಸರ್ಕಾರವೇ ತಂತ್ರಾಂಶ ಅಭಿವೃದ್ಧಿಪಡಿಸಿರುವಾಗ ಖಾಸಗಿ ಸಂಸ್ಥೆಗೆ ಅದೇ ಕಾರ್ಯದ ಗುತ್ತಿಗೆ ಯಾಕೆ ನೀಡಲಾಯಿತು ಎಂಬ ಅಂಶವನ್ನು ಈ ಬಗ್ಗೆ ರಚಿಸಿದ ಸಮಿತಿಯು ಪರಿಶೀಲಿಸಬೇಕೆಂದು ತೀರ್ಮಾನಿಸಲಾಯಿತು.

ಈ ಸಂಸ್ಥೆಗೆ ವಹಿಸಿದ ಕಾರ್ಯಾಭಾರದ ಆದೇಶಕ್ಕೂ ಸಂಸ್ಥೆಯು ನಿರ್ವಹಿಸುತ್ತಿರುವ ಕೆಲಸಕ್ಕೂ ವ್ಯತ್ಯಾಸವಿರುವುದು ಮೇಲ್ನೋಟಕ್ಕೆ ಕಂಡು ಬಂತು. ವಿಶ್ವವಿದ್ಯಾನಿಲಯವು Keonicsಸಂಸ್ಥೆಗೆ ಕಾರ್ಯಾದೇಶ ನೀಡಿರುತ್ತದೆ. Keonicsಸಂಸ್ಥೆಯು L1ಬಿಡ್ಡುದಾರರಾದ ಮೆ. ಕಿಯೋನಿಕ್ಸ್ ರಿಟೈರ್ಡ್ ಆಫೀಸರ್ಸ್ &ಎಂಪ್ಲೋಯಿಸ್ ಅಸೋಸಿಯೇಶನ್ ಸಂಸ್ಥೆಗೆ ವಹಿಸಿರುತ್ತದೆ ಎಂಬುದಾಗಿ ಪತ್ರದಲ್ಲಿ ತಿಳಿಸಿರುತ್ತದೆ. ಆದರೆ ಮೆ. ಕಿಯೋನಿಕ್ಸ್ ರಿಟೈರ್ಡ್ ಆಫೀಸರ್ಸ್ &ಎಂಪ್ಲೋಯಿಸ್ ಅಸೋಸಿಯೇಶನ್ ಸಂಸ್ಥೆಯಿಂದ Campus Management International Pvt Ltd ಸಂಸ್ಥೆಯು ಉಪಗುತ್ತಿಗೆ ಪಡೆದಿದೆಯೇ ಅಥವಾ ಒಪ್ಪಂದ ಮಾಡಿಕೊಂಡಿದೆಯೇ ಎಂಬ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ.

ಇನ್ನುಳಿದ ಅಂಶಗಳನ್ನು ಪರಿಶೀಲಿಸಲು ಸಿಂಡಿಕೇಟು ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಈ ಸಮಿತಿಯಲ್ಲಿ ಪ್ರೊ. ಕರುಣಾಕರ್ ಎ. ಕೋಟೆಗಾರ್– ಅಧ್ಯಕ್ಷರು, ಶ್ರೀ ರವೀಂಂದ್ರನಾಥ ರೈ, ಕುಲಸಚಿವರು, ಕುಲಸಚಿವರು(ಪರೀಕ್ಷಾಂಗ), ಹಣಕಾಸು ಅಧಿಕಾರಿ ಹಾಗೂ ಕುಲಪತಿಯವರು ಸೂಚಿಸುವ ಇತರ ಸದಸ್ಯರು ಇರುವುದೆಂದು ತೀರ್ಮಾನಿಸಲಾಯಿತು.

Campus Management International Pvt Ltd ಸಂಸ್ಥೆಯ ಪ್ರತಿನಿಧಿಯು ಶೇಕಡಾ 30ರಷ್ಟು ಹಣ ಪಾವತಿ ಆಗಿದೆ ಎಂದು ತಿಳಿಸಿರುತ್ತಾರೆ. ಸರ್ವರ್ ಅನ್ನು ವಿಶ್ವವಿದ್ಯಾನಿಲಯದ ಕಡೆಯಿಂದ ಈಗಾಗಲೇ ಖರೀದಿಸಿದ್ದು, ಅದಕ್ಕೆ ಪೂರಕವಾದ ಮೈಕ್ರೋಸಾಫ್ಟ್ತಂತ್ರಾಂಶವನ್ನು ಖರೀದಿಸದೆ ಇರುವುದರಿಂದ ಈಗಾಗಲೇ ಅಭಿವೃದ್ಧಿ ಪಡಿಸಿರುವ ತಂತ್ರಾಂಶವನ್ನು ಅಳವಡಿಸಲು ಸಾಧ್ಯವಿಲ್ಲದಾಗಿದೆ. ಸರ್ವರ್ ಅನ್ನು ಬಾಡಿಗೆ ನೆಲೆಯಲ್ಲಿ ಪಡಕೊಂಡು, ಕಳೆದ 3 ತಿಂಗಳುಗಳಿಂದ ಅವರೇ ಬಾಡಿಗೆ ಹಣವನ್ನು ಪಾವತಿಸುತ್ತಿದ್ದಾರೆ. ಈ ಕುರಿತು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಇ–ಮೇಲ್ ಮೂಲಕ ಬರೆದಿರುವ ಪತ್ರ ವ್ಯವಹಾರಕ್ಕೆ ಆಡಳಿತವು ಸ್ಪಂದಿಸಿರುವುದಿಲ್ಲ.

ಮಂಗಳೂರು ವಿಶ್ವವಿದ್ಯಾನಿಲಯದ ಕಡೆಯಿಂದ ರಚಿಸಲಾದ ತಾಂತ್ರಿಕ ಪರಿಶೀಲನಾ ಸಮಿತಿಯ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಸದಸ್ಯರಾದ ಶ್ರೀ ಮನೋಹರ್ ಎಂ ಗೋರನಕೊಲ್ಲ, ಸಿಸ್ಟಮ್ ಅನಾಲಿಸ್ಟ್ ಸಭೆಗೆ ಮಾಹಿತಿ ನೀಡಿದರು.

Campus Management International Pvt Ltd ಸಂಸ್ಥೆಯವರು ಸಾಫ್ಟ್ವೇರ್ ಅಭಿವೃದ್ಧಿ ಪ್ರಗತಿಯ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು. ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಕಿಯೋನಿಕ್ಸ್ ಸಂಸ್ಥೆಯ ನಡುವಿನ ಒಪ್ಪಂದದ ಕುರಿತಾದ ಸಂದೇಹಗಳಿಗೆ ಸೂಕ್ತ ಉತ್ತರವನ್ನು ಕಂಡುಕೊಳ್ಳಲು ಸಿಂಡಿಕೇಟು ನಿರ್ಣಯಿಸಿದೆ. ಈ ಅಂಶಗಳನ್ನು ಪರಿಗಣಿಸಿ ಸಮಿತಿಯು 15 ದಿವಸಗಳೊಳಗಾಗಿ ಅಂತಿಮ ವರದಿಯನ್ನು ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು.

ಸಮಗ್ರ ವರದಿಯ ಆಧಾರದಲ್ಲಿ ಮುಂದಿನ ತೀರ್ಮಾನ ಕೈಗೊಳ್ಳಲು ಸಿಂಡಿಕೇಟು ಸಭೆಯು ತೀರ್ಮಾನಿಸಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ವಿ.ಸ.3:03(2020)

**ವಿಷಯ:** ಪರೀಕ್ಷಾ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಐದು ವರ್ಷಗಳ ಮಾಹಿತಿ ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ 2015 ರಿಂದ 2020 ರವರೆಗಿನ ಪರೀಕ್ಷಾ ಅವ್ಯವಹಾರದ ಸ್ವರೂಪವನ್ನು ವಿಷಯಗಳ ಆಧಾರದ ಮೇಲೆ, ಅವ್ಯವಹಾರ ನಡೆದ ಕಾಲೇಜುಗಳ ಆಧಾರದ ಮೇಲೆ ಹಾಗೂ ವಾರ್ಷಿಕ ಸಂಖ್ಯೆಗಳ ಆಧಾರದ ಮೇಲೆ ಒಂದು ಕೋಷ್ಠಕವನ್ನು ತಯಾರಿಸಲು ನಿರ್ಣಯಿಸಲಾಯಿತು.

ಮುಂದುವರಿದು ಅವ್ಯವಹಾರಗಳನ್ನು ತಡೆಗಟ್ಟಲು ಜಾಗೃತದಳದ ಸಂಖ್ಯೆಯನ್ನು ಹೆಚ್ಚಿಸುವುದು; ಅವರ ಜವಾಬ್ದಾರಿಯನ್ನು ಮರುವ್ಯಾಖ್ಯಾನಗೊಳಿಸುವುದು; ಜಾಗೃತದಳಕ್ಕೆ ಇದರ ಕುರಿತು ತಿಳುವಳಿಕೆ ನೀಡುವುದು ಹಾಗೂ ಎಲ್ಲೆಲ್ಲಿ ಅನುಕೂಲವಿದೆಯೋ ಅಲ್ಲಿ ಸಿಸಿಟಿವಿಗಳನ್ನು ಅಳವಡಿಸಿ ಅವ್ಯವಹಾರದ ಪ್ರಮಾಣವನ್ನು ಕಡಿಮೆ ಮಾಡಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.3:04(2020)

**ವಿಷಯ:** ಶ್ರೀ ರಮೇಶ ಕೆ., ಸಿಂಡಿಕೇಟು ಸದಸ್ಯರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಸುಧಾರಣೆ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆ

**ನಿರ್ಣಯ:** ಕರ್ನಾಟಕ ರಾಜ್ಯ ಸರಕಾರದ ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಂತ್ರಣದಲ್ಲಿರುವ ಮಂಗಳೂರಿನ ಸರಕಾರಿ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ಆಯ್ಕೆ ಶ್ರೇಣಿಯ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಹಾಗೂ ಪರೀಕ್ಷಾ ಮಂಡಳಿಯ ನಿಯಂತ್ರಣಾಧಿಕಾರಿಯಾಗಿ 16 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಇಲೆಕ್ಟ್ರಾನಿಕ್ಸ್ &ಕಮ್ಯುನಿಕೇಶನ್ಸ್ ವಿಭಾಗದ ಮುಖ್ಯಸ್ಥರಾದ ಗಣಕಯಂತ್ರ ತಂತ್ರಾಂಶ ತಜ್ಞರಾದ ಶ್ರೀಯುತ ಹರೀಶ್ ಶೆಟ್ಟಿಯವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸುವ ಉದ್ದೇಶದಿಂದ ಕನಿಷ್ಠ ವೆಚ್ಚದಲ್ಲಿ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವ ಕುರಿತು ಸವಿವರವಾದ ಪ್ರಸ್ತಾವನೆಯನ್ನು ಸಿಂಡಿಕೇಟ್‌ನ ಮುಂದೆ ಸಲ್ಲಿಸಿ ಈ ಕುರಿತು ಸಮಗ್ರ ತಾಂತ್ರಿಕ ಅಂಶಗಳನ್ನು ವಿವರಿಸಿದರು. ಸದರಿ ತಂತ್ರಾಂಶವನ್ನು ರಾಜ್ಯದ ತಾಂತ್ರಿಕ ಪರೀಕ್ಷಾ ಮಂಡಳಿಯು ಯಶಸ್ವಿಯಾಗಿ ಕಳೆದ 15 ವರ್ಷಗಳಿಂದ ಬಳಸಿಕೊಂಡು ಬರುತ್ತಿರುವುದರಿಂದ, ಶ್ರೀಯುತ ಹರೀಶ್ ಶೆಟ್ಟಿಯವರು ನೀಡಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸ್ವಾಗತಿಸಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸುವ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸಲು ತಜ್ಞರ ಸಮಿತಿಯನ್ನು ರಚಿಸಲು ಸಹ ನಿರ್ಣಯಿಸಿತು. ಸಮಿತಿಯ ಅಧ್ಯಕ್ಷತೆಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಿ ಆದಷ್ಟು ಶೀಘ್ರವಾಗಿ ತಾಂತ್ರಿಕ ವರದಿ ಸಲ್ಲಿಸಲು ಸಿಂಡಿಕೇಟ್ ನಿರ್ದೇಶಿಸಿದ್ದು, ಸದರಿ ಸಮಿತಿಯ ವರದಿ ಸಲ್ಲಿಕೆಯಾದ ನಂತರ ಕ್ಯಾಂಪಸ್ ಮ್ಯಾನೇಜ್‌ಮೆಂಟ್ ಸಿಸ್ಟಂ ಕುರಿತು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ವಿ.ಸ.3:05(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಚೇರಿ/ವಿಭಾಗಗಳ ಕಂಪ್ಯೂಟರ್/ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಗೆ ನೀಡಿದ ಗುತ್ತಿಗೆ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಚೇರಿ/ವಿಭಾಗಗಳ ಕಂಪ್ಯೂಟರ್/ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯನ್ನು ಹೊಸ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಹಾಲಿ ಗುತ್ತಿಗೆದಾರರಾದ ಮೆ. ಬೇಸ್ ಕಂಪ್ಯೂಟರ್ಸ್, ಮಂಗಳೂರು ಇವರಿಂದ ಅನುಮೋದನೆಗೊಂಡ ದರ ಮತ್ತು ಷರತ್ತಿನಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಮುಂದುವರಿಸುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ಅನುಮೋದಿಸಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ.3:06(2020)

**ವಿಷಯ:** ಶೈಕ್ಷಣಿಕ ವರ್ಷ 2020–21 ಸಾಲಿನ ಸಂಯೋಜನೆಯ ಬಗ್ಗೆ.

**ನಿರ್ಣಯ:** ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿಕೋವಿಡ್–19 ಹಿನ್ನೆಲೆಯಲ್ಲಿ ಎಲ್ಲಾ 208 ಕಾಲೇಜುಗಳಿಗೆ ಭೇಟಿ ನೀಡುವುದು ಸಾಧ್ಯವಿಲ್ಲವೆಂಬ ಅಂಶವನ್ನು ಪರಿಗಣಿಸಿ 2020–21 ಸಾಲಿಗೆ ಹೊಸದಾಗಿ ಅರ್ಜಿ

ಸಲ್ಲಿಸಿರುವ ಕಾಲೇಜುಗಳಿಗೆ, ಹೊಸ ಕೋರ್ಸ್ ಆರಂಭಿಸುವ ಕಾಲೇಜುಗಳಿಗೆ ಹಾಗೂ ಹೆಚ್ಚುವರಿ ಸೀಟ್‌ಗಳನ್ನು ಕೋರಿ ಅರ್ಜಿ ಸಲ್ಲಿಸಿರುವ ಕಾಲೇಜುಗಳಿಗೆ ಮಾತ್ರ ಸ್ಥಳೀಯ ವಿಚಾರಣಾ ಸಮಿತಿಯನ್ನು ಕಳುಹಿಸುವ ಬಗ್ಗೆ ಹಾಗೂ ಸ್ಥಳೀಯ ವಿಚಾರಣಾ ಸಮಿತಿಗಳನ್ನು ಇದಕ್ಕನುಗುಣವಾಗಿ ಪುನರ್‌ರಚಿಸಲು ತೀರ್ಮಾನಿಸಲಾಯಿತು.

ಹೊಸ ಬ್ಯಾಚ್ ಕೇಳುವಾಗ ಹತ್ತಿರದ ಕಾಲೇಜುಗಳನ್ನು ಗಮನಿಸಿಕೊಂಡು ಅವರಿಗೆ ತೊಂದರೆ ಆಗದ ರೀತಿಯಲ್ಲಿ ಅನುಮತಿ ನೀಡಲು ಸಿಂಡಿಕೇಟು ಸಭೆಯು ಶಿಫಾರಸ್ಸು ಮಾಡಿತು.

ಹೊಸ ಕಾಲೇಜುಗಳಿಗೆ ಮತ್ತು ವಿಸ್ತರಣೆ ಕೇಳಿರುವ ಕಾಲೇಜುಗಳಿಗೆ ಸರಕಾರಕ್ಕೆ ಸಲ್ಲಿಸುವ ಪ್ರಸ್ತಾವನೆ ಇದ್ದ ಸಂದರ್ಭದಲ್ಲಿ ಆದ್ಯತೆಯ ಮೇರೆಗೆ ವಿಶೇಷ ಶೈಕ್ಷಣಿಕ ಮಂಡಳಿ ಸಭೆ ಕರೆದು ಅನುಮೋದಿಸುವುದು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ವಿ.ಸ.3:07(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿವಿ ಮತ್ತು ಬಯೋಮೆಟ್ರಿಕ್ ಹಾಗೂ ಸೋಲಾರ್ ಉಪಕರಣಗಳ ಪ್ರಕ್ರಿಯೆ, ಕಾರ್ಯಕ್ಷಮತೆ ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಆಂತರಿಕ ಪರಿಶೀಲನಾ ಸಮಿತಿಯು ಪರಿಶೀಲನೆ ನಡೆಸಿ ಸಲ್ಲಿಸಿದ ವರದಿಯ ಬಗ್ಗೆ.

**ನಿರ್ಣಯ:** ಸೋಲಾರ್ ಮೇಲ್ಚಾವಣಿ ಖರೀದಿ ಪ್ರಕ್ರಿಯೆ, ಕಾರ್ಯನಿರ್ವಹಣೆ ಮತ್ತು ಸಂಬಂಧಿತ ದಾಖಲೆಗಳ ಕುರಿತಾಗಿ ವಿಶ್ವವಿದ್ಯಾನಿಲಯದ ಕುಲಪತಿಗಳು ರಚಿಸಿರುವ ಸಮಿತಿಯು ಸಲ್ಲಿಸಿದ ವರದಿಯನ್ನು ಸಿಂಡಿಕೇಟಿನ ಮುಂದೆ ಮಂಡಿಸಲಾಯಿತು. ಸದರಿ ವರದಿಯನ್ನು ಸಿಂಡಿಕೇಟು ಪರಿಗಣಿಸಿ ಸದರಿ ವರದಿಯ 17ನೇ ಪುಟದಲ್ಲಿ ದಾಖಲಿಸಿರುವ ಅಂಶಗಳನ್ನು ಪರಿಶೀಲಿಸಿದಾಗ ಹಿಂದೆ ಕಾರ್ಯನಿರ್ವಹಿಸಿದ ಕುಲಪತಿಗಳು ಮತ್ತು ಸಹಾಯಕ ಅಭಿಯಂತರರು ಇವರುಗಳ ವಿರುದ್ಧ ಮೇಲ್ನೋಟದ ಅಧಿಕಾರದ ದುರುಪಯೋಗಕ್ಕೆ ಸಂಬಂಧಿಸಿದ ಸಾಕ್ಷಾಧಾರ ಲಭ್ಯವಿದೆ ಎಂದು ದಾಖಲಿಸಿರುವ ಹಿನ್ನೆಲೆಯಲ್ಲಿ, ಸದರಿ ವ್ಯಕ್ತಿಗಳ/ಅಧಿಕಾರಿಗಳ ಹೇಳಿಕೆಯನ್ನು ಪಡೆದುಕೊಳ್ಳದಿರುವುದನ್ನು ಗಮನಿಸಿರುವುದರಿಂದ ಸಂಬಂಧಿತರೆಲ್ಲರಿಗೂ ತಮ್ಮ ಹೇಳಿಕೆಯನ್ನು/ಅಹವಾಲನ್ನು/ಸಮಜಾಯಿಷಿಕೆಯನ್ನು ನೀಡಲು ಅವಕಾಶವನ್ನು ಕಲ್ಪಿಸುವುದು ಸಹಜ ನ್ಯಾಯ ತತ್ವಗಳ ಪ್ರಕಾರ ಅಗತ್ಯ. ಆದುದರಿಂದ ಸಂಬಂಧಿತರಿಗೆ ಹೇಳಿಕೆ ನೀಡಲು ಅವಕಾಶವನ್ನು ನೀಡುವ ಹೊಣೆಗಾರಿಕೆಯೊಂದಿಗೆ ಹೆಚ್ಚುವರಿ ವಿಚಾರಣೆ ನಡೆಸಿ/ಮುಂದುವರೆಸಿ ಸಮಗ್ರ ವರದಿಯನ್ನು ಅವರ ಹೇಳಿಕೆಗಳೊಂದಿಗೆ ಸಿಂಡಿಕೇಟಿಗೆ ಮಂಡಿಸಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.

ಸಿ.ಸಿ.ಟಿವಿ ಮತ್ತು ಬಯೋಮೆಟ್ರಿಕ್ ಖರೀದಿ ಪ್ರಕ್ರಿಯೆ, ಕಾರ್ಯನಿರ್ವಹಣೆ ಮತ್ತು ಸಂಬಂಧಿತ ದಾಖಲೆಗಳ ಕುರಿತಾಗಿ ವಿಶ್ವವಿದ್ಯಾನಿಲಯದ ಕುಲಪತಿಗಳು ರಚಿಸಿರುವ ಸಮಿತಿಯು ಸಲ್ಲಿಸಿದ ವರದಿಯನ್ನು ಸಿಂಡಿಕೇಟಿನ ಮುಂದೆ ಮಂಡಿಸಲಾಯಿತು. ಸದರಿ ವರದಿಯನ್ನು ಸಿಂಡಿಕೇಟು ಪರಿಗಣಿಸಿ ಸದರಿ ವರದಿಯ 19ನೇ ಪುಟದಲ್ಲಿ ದಾಖಲಿಸಿರುವ ಅಂಶಗಳನ್ನು ಪರಿಶೀಲಿಸಿದಾಗ ಹಿಂದೆ ಕಾರ್ಯನಿರ್ವಹಿಸಿದಕುಲಪತಿಗಳು ಮತ್ತು ಇತರ ಅಧಿಕಾರಿಗಳ ವಿರುದ್ಧ ಮೇಲ್ನೋಟದ ಅಧಿಕಾರದ ದುರುಪಯೋಗಕ್ಕೆ ಸಂಬಂಧಿಸಿದ ಸಾಕ್ಷಾಧಾರ ಲಭ್ಯವಿದೆ ಎಂದು ದಾಖಲಿಸಿರುವ ಹಿನ್ನೆಲೆಯಲ್ಲಿ, ಸದರಿ ವ್ಯಕ್ತಿಗಳ/ಅಧಿಕಾರಿಗಳ ಹೇಳಿಕೆಯನ್ನು ಪಡೆದುಕೊಳ್ಳದಿರುವುದನ್ನು ಗಮನಿಸಿರುವುದರಿಂದ ಸಂಬಂಧಿತರೆಲ್ಲರಿಗೂ ತಮ್ಮ ಹೇಳಿಕೆಯನ್ನು/ಅಹವಾಲನ್ನು/ಸಮಜಾಯಿಷಿಕೆಯನ್ನು ನೀಡಲು ಅವಕಾಶವನ್ನು ಕಲ್ಪಿಸುವುದು ಸಹಜ ನ್ಯಾಯ ತತ್ವಗಳ ಪ್ರಕಾರ ಅಗತ್ಯ. ಆದುದರಿಂದ ಸಂಬಂಧಿತರಿಗೆ ಹೇಳಿಕೆ ನೀಡಲು ಅವಕಾಶವನ್ನು ನೀಡುವ ಹೊಣೆಗಾರಿಕೆಯೊಂದಿಗೆ ಹೆಚ್ಚುವರಿ ವಿಚಾರಣೆ ನಡೆಸಿ/ಮುಂದುವರೆಸಿ ಸಮಗ್ರ ವರದಿಯನ್ನು ಅವರ ಹೇಳಿಕೆಗಳೊಂದಿಗೆ ಸಿಂಡಿಕೇಟಿಗೆ ಮಂಡಿಸಲು ಸಿಂಡಿಕೇಟು ಸಭೆಯು ನಿರ್ಣಯಿಸಿತು.

**III. ಇತರ ವಿಷಯಗಳು :**

1) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ ಎನ್ನಲಾದ ವಿವಿಧ ಹಗರಣಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ರಾಜ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಪತ್ರ ಸಂಖ್ಯೆ: ಇಡಿ90 ಯುಡಿವಿ 2018 ದಿನಾಂಕ 18.05.2020 ರ ಮೂಲಕ ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳು 2 ತಿಂಗಳ ಕಾಲಾವಧಿಯಲ್ಲಿ ಸಿಸಿಎ ನಿಯಮಾವಳಿ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸಿ ಸಿಂಡಿಕೇಟಿಗೆ ಮಂಡಿಸುವುದಾಗಿ ತಿಳಿಸಿರುತ್ತಾರೆ. ಇದನ್ನು ಸಿಂಡಿಕೇಟು ಗೌರವ ಪೂರ್ವಕವಾಗಿ ಸ್ವಾಗತಿಸುತ್ತದೆ.

ಆದರೆ ಸದರಿ ಪತ್ರದಲ್ಲಿ ನಮೂದಿಸಿದ ಎಲ್ಲಾ ವಿಷಯಗಳಿಗೆ ಸಂಬಂಧಿಸಿ ಸಮಗ್ರ ತನಿಖೆ ನಡೆಸಲು ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಿಂದ ಅಥವಾ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಬೇಕೆಂದು ಸಿಂಡಿಕೇಟು ಸದಸ್ಯರುಗಳಾದ ಪ್ರೊ. ಕರುಣಾಕರ್ ಎ. ಕೋಟೆಗಾರ್, ಶ್ರೀ ರವಿಚಂದ್ರ ಪಿ.ಎಂ., ಡಾ. ಎಂ.ಎಸ್. ತಳವಾರ, ಶ್ರೀ ಕೆ. ರಮೇಶ, ಡಾ. ಪಾರ್ವತಿ ಅಪ್ಪಯ್ಯ, ಶ್ರೀ ಮೋಹನ್ ಪಡಿವಾಳ್, ಶ್ರೀ ವಿವೇಕಾನಂದ ಪನಿಯಾಲ, ಶ್ರೀ ರವೀಂದ್ರನಾಥ ರೈ ಇವರುಗಳು ಮನವಿ ಮಾಡಿರುತ್ತಾರೆ.

ಸದರಿ ಇಲಾಖಾ ವಿಚಾರಣೆಗೆ ಪೂರಕವಾಗಿ ಮತ್ತು ಹೆಚ್ಚುವರಿಯಾಗಿ ಅಗತ್ಯ ಕಂಡು ಬಂದಲ್ಲಿ ಮೇಲೆ ಹೇಳಿದಂತೆ ನಿವೃತ್ತ ನ್ಯಾಯಾಧೀಶರಿಂದ ಸಮಗ್ರವಾದ ತನಿಖೆ ನಡೆಸಲು ಮೇಲೆ ಹೆಸರಿಸಿದ 8 ಜನ ಸದಸ್ಯರ ಪ್ರಸ್ತಾವನೆಯನ್ನು ಸಿಂಡಿಕೇಟಿನ ಉಳಿದೆಲ್ಲಾ ಸದಸ್ಯರು ಸರ್ವಾನುಮತದಿಂದ ಬೆಂಬಲಿಸಿ ಸರ್ವಾನುಮತದಿಂದ ನಿರ್ಣಯವನ್ನು ಕೈಗೊಳ್ಳಲಾಯಿತು. ಮಾನ್ಯ ಕುಲಪತಿಗಳು  ನಡೆಸುವ ಇಲಾಖಾ ವಿಚಾರಣಾ ವ್ಯಾಪ್ತಿಯಲ್ಲಿ ಪ್ರಕರಣದ ಎಲ್ಲಾ ವಿಷಯಗಳು ಮತ್ತು ಆ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳು/ಸಿಬ್ಬಂದಿಗಳು ಬರಲು ಅವಕಾಶ ಇಲ್ಲದೇ ಇರುವುದರಿಂದ ಮೇಲಿನಂತೆ ನ್ಯಾಯಾಂಗ ವಿಚಾರಣೆಯನ್ನು ನಡೆಸಲು ಒತ್ತಾಯಿಸಲಾಯಿತು.

ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ಮತ್ತು ನಿರ್ಣಯಗಳನ್ನು ಅನುಷ್ಠಾನಕ್ಕೆ ತರಲು ಘನ ಕರ್ನಾಟಕ ರಾಜ್ಯಸರಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

2. ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಕೆ. ರಮೇಶ ಇವರು ಮಂಗಳೂರು ವಿಶ್ವವಿದ್ಯಾನಿಲಯದ ಬೇರೆ ಬೇರೆ ಅಧ್ಯಯನ ಪೀಠಗಳನ್ನು ಪ್ರಾಧ್ಯಾಪಕರುಗಳು ಪಾಠಗಳ ಜೊತೆ ಹೆಚ್ಚುವರಿಯಾಗಿ ನೋಡಿಕೊಳ್ಳುತ್ತಿದ್ದು ಇದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಅಧ್ಯಯನ ಮಾಡಿರುವ ಸಾರ್ವಜನಿಕ ಕ್ಷೇತದಲ್ಲಿ ಗುರುತಿಸಿಕೊಂಡಿರುವವರಿಗೆ ಇಲ್ಲಿ ಸೇವೆ ಮಾಡಲು ಅವಕಾಶ ನೀಡಬಹುದು ಎಂದು ತಿಳಿಸಿದರು.

ಪ್ರಸ್ತುತ ಬಹುತೇಕ ಪೀಠಗಳಲ್ಲಿ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು ಸಂಯೋಜಕರಾಗಿ ಕೆಲಸ ನಿರ್ವಹಿಸುತ್ತಿದ್ದು ಇದರಿಂದಾಗಿ ಅವರ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಉಂಟಾಗುತ್ತದೆ. ಈ ಬಗ್ಗೆ ವಿವಿಧ ಪೀಠಗಳ ಪರಿನಿಯಮ(Statute)ಗಳಲ್ಲಿ ಸೂಚಿಸಲಾಗಿರುವ ಅಂಶಗಳನ್ನು ಹಾಗೂ ಪೀಠಗಳಲ್ಲಿ ಸಂಯೋಜಕರಾಗಿ ಕರ್ತವ್ಯನಿರ್ವಹಿಸಲು ಬೇಕಾಗಿರುವ ಅರ್ಹತೆ ಇತ್ಯಾದಿ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.

3. ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ವಿವೇಕಾನಂದ ಪನಿಯಾಲ ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠವನ್ನು ಸ್ಥಾಪಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಈ ಸಂಬಂಧ ಶ್ರೀ ರಾಮಕೃಷ್ಣ ಆಶ್ರಮದವರ ನೆರವು ಪಡೆಯುವ ಬಗ್ಗೆ ಚರ್ಚಿಸಲಾಯಿತು. .

4.ಮಾನ್ಯ ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ್ ಎ. ಕೋಟೆಗಾರ್ ಅವರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಚುರುಕು ಮುಟ್ಟಿಸುವ ಅಗತ್ಯವಿದೆ. ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿಹಲವಾರು ಮಾಹಿತಿಗಳು

ತಪ್ಪಾಗಿವೆ, ಹಳೆಯದಾಗಿದೆ. ಸಿಂಡಿಕೇಟು ಸದಸ್ಯರಿಗೆ ಮಾಹಿತಿ, ಪತ್ರ ಇತ್ಯಾದಿಗಳನ್ನು ಕಳುಹಿಸುವಾಗ PDF ರೂಪದಲ್ಲಿ ಕಳುಹಿಸಬೇಕೆಂದು ಸೂಚಿಸಿದರು. ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಂಪರ್ಕ ವಿಳಾಸ, ಇಮೇಲ್ ವಿಳಾಸ, ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಮಾಹಿತಿ, ವಾರ್ಷಿಕ ವರದಿಯಲ್ಲಿ ದಾಖಲಾಗಿರುವ ಮಾಹಿತಿಗಳು ತಪ್ಪಿದ್ದು ಇವುಗಳನ್ನು ಸರಿಪಡಿಸಿ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ತಿಳಿಸಿದರು.

ದಿನಾಂಕ 23.06.2020 ರ ಸಿಂಡಿಕೇಟು ಸಭೆಯ ನಡವಳಿಯನ್ನು ವೆಬ್‌ಸೈಟಿನಲ್ಲಿ ಅಪ್‌ಲೋಡ್ ಮಾಡಿಲ್ಲದಿರುವುದನ್ನು ಸಭೆಯ ಗಮನಕ್ಕೆ ತಂದರು. ಸಿಂಡಿಕೇಟು ಸಭೆಗೆ ಮಂಡಿಸಲಾಗುವ ಅಜೆಂಡಾಗಳನ್ನು ನಿಯಮಗಳಲ್ಲಿ ಸೂಚಿಸಿರುವ ಅವಧಿಯ ಒಳಗಡೆಯೇ ಕಡ್ಡಾಯವಾಗಿ ಕಳುಹಿಸಿ ಕೊಡಬೇಕು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಟೇಬಲ್ ಅಜೆಂಡಾವನ್ನು ಅತ್ಯಗತ್ಯ ಇರುವ ವಿಷಯಗಳಿಗೆ ಮಾತ್ರ ಸೀಮಿತಗೊಳಿಸಬೇಕು ಎಂದು ತಿಳಿಸಿದರು. ಇ–ಮೇಲ್ ಪತ್ರ ವ್ಯವಹಾರವನ್ನು ಸಿಬ್ಬಂದಿಗಳು, ಅಧಿಕಾರಿಗಳು ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಎಂದರು. ವಿಶ್ವವಿದ್ಯಾನಿಲಯದ ಸಿಬ್ಬಂದಿಗಳು, ಅಧಿಕಾರಿಗಳುಕೆಲಸ – ಕಾರ್ಯಗಳನ್ನು ಮಾಡುವಾಗstandard operating procedure (SOP)ಅನುಸರಿಸಲು ಮಾನ್ಯ ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ್ ಎ. ಕೋಟೆಗಾರ್ ಇವರು ಸಲಹೆ ನೀಡಿದರು.

5. ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರವಿಚಂದ್ರ ಪಿ.ಎನ್ ಇವರು ಶೈಕ್ಷಣಿಕವಾಗಿ, ಅಭಿವೃದ್ಧಿ ದೃಷ್ಟಿಯಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ದೀರ್ಘಕಾಲದಲ್ಲಿ ಹಾಗೂ ತುರ್ತಾಗಿ ಮಾಡುವಂತಹ ಕಾರ್ಯಗಳ ಬಗ್ಗೆ ಅವರ ಅವಧಿಯಲ್ಲಿ ಯಾವ ರೀತಿಯ ಅಮೂಲಾಗ್ರ ಬದಲಾವಣೆ ಮಾಡಬಹುದೆಂದು ಪ್ರತಿಯೊಬ್ಬ ಸಿಂಡಿಕೇಟು ಸದಸ್ಯರಿಗೆ Vision ಇರುತ್ತದೆಂದು ವಿಷಯ ಪ್ರಸ್ತಾಪಿಸಿದಾಗ ಮಾನ್ಯ ಕುಲಪತಿಗಳು ಈ ಬಗ್ಗೆ ಸಭೆ ಕರೆದು ಚರ್ಚಿಸಲು ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

6. ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಕೆ. ರಮೇಶ್ ಇವರು ಮಂಗಳೂರು ವಿಶ್ವವಿದ್ಯಾನಿಲಯದ ಜಾಲತಾಣದ ನಿರ್ವಹಣೆಗಾಗಿ ಮಾಡಿರುವ ವೆಚ್ಚದ ಸಂಪೂರ್ಣ ಮಾಹಿತಿ ಒದಗಿಸುವಂತೆ ತಿಳಿಸಿದರು.

7. ಮಂಗಳೂರು ವಿಶ್ವವಿದ್ಯಾನಿಲಯದ ಫೇಸ್‌ಬುಕ್ ಪುಟ, ಟ್ವಿಟರ್ ಖಾತೆ ಹಾಗೂ ಇನ್ನಿತರ ಸಾಮಾಜಿಕ ಜಾಲತಾಣಗಳಲ್ಲಿ ಕಾರ್ಯಕ್ರಮಗಳನ್ನು ಪ್ರಕಟಿಸುವಾಗ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ಬಳಸಿಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡಿದಂತಾಗುತ್ತದೆ. ಈ ಬಗ್ಗೆ ಅವರಿಗೆ ಯೋಜನೆಗಳನ್ನು (project) ನೀಡಬಹುದೆಂದು ಸಭೆ ಅಭಿಪ್ರಾಯ ಪಟ್ಟಿತು.
8. ಸಾಧ್ಯವಾದಷ್ಟು ಮಟ್ಟಿಗೆ ಸಭೆ, ಚರ್ಚೆಗಳನ್ನು ಗೂಗಲ್ ಮೀಟ್‌ನಂತಹ ಆ್ಯಪ್ಲಿಕೇಶನ್‌ಗಳ ಮೂಲಕ ನಿರ್ವಹಿಸಲು ನಿರ್ಧರಿಸಲಾಯಿತು.
9. ಮಂಗಳೂರು ವಿಶ್ವವಿದ್ಯಾನಿಲಯವು ತನ್ನದೇ ಯು ಟ್ಯೂಬ್ ಚ್ಯಾನೆಲನ್ನು ಆರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

10. ಮಂಗಳೂರು ವಿಶ್ವವಿದ್ಯಾನಿಲಯದ ಫೋಟೋಗ್ರಾಫರ್ ಕಂ ಆರ್ಟಿಸ್ಟ್‌ರವರನ್ನು ಮಾನ್ಯ ಕುಲಪತಿಯವರ ಕಚೇರಿಗೆ ಅಗತ್ಯಕ್ಕೆ ತಕ್ಕಂತೆ ನಿಯೋಜಿಸಲು ಸಿಂಡಿಕೇಟು ಸಭೆಯು ತೀರ್ಮಾನಿಸಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |